# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 245(318) |
| ಉತ್ತರಿಸಬೇಕಾದ ದಿನಾಂಕ | : | 06.12.2023 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ಜನರಿಗೆ ಯಾವ ಯಾವ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ನೀಡಲಾಗುತ್ತಿದೆ; ಪ್ರತಿ ತಿಂಗಳ ಪಿಂಚಣಿಯ ಮೊತ್ತವೆಷ್ಟು; ವಿವಿಧ ಪಿಂಚಣಿಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡುವುದು; | ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ಅಶಕ್ತ ಹಾಗೂ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತಾ ಯೋಜನೆಗಳಡಿ ಆರ್ಥಿಕ ಸಹಾಯ ಒದಗಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಒಟ್ಟು 78.22 ಲಕ್ಷ ಫಲಾನುಭವಿಗಳು ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ. ಯೋಜನಾವಾರು ಪಿಂಚಣಿಯ ಮೊತ್ತದ ವಿವರ ಕೆಳಗಿನಂತಿದೆ. |

| ಕ್ರಸಂ | ಯೋಜನೆ | ಪಿಂಚಣಿ ಮೊತ್ತ [ರೂ.ಗಳಲ್ಲಿ] |
|---|---|---|
| 1 | ವೃದ್ಧಾಪ್ಯವೇತನ : | |
| | 60 ರಿಂದ 64 ವರ್ಷದೊಳಗಿನವರಿಗೆ | 600/- |
| | 65 ವರ್ಷಮೇಲ್ಪಟ್ಟವರಿಗೆ | 1,200/- |
| 2 | ವಿಧವಾವೇತನ | 800/- |
| 3 | ಅಂಗವಿಕಲವೇತನ : | |
| | ಶೇಕಡ 40% ರಷ್ಟುಅಂಗವಿಕಲತೆಯುಳ್ಳವರಿಗೆ | 800/- |
| | ಶೇಕಡ 75%ಕ್ಕಿಂತ ಹೆಚ್ಚುಅಂಗವಿಕಲತೆಯುಳ್ಳವರಿಗ | 1,400/- |
| | ಶೇಕಡ 75%ಕ್ಕಿಂತ ಹೆಚ್ಚು ಮನೋ ವೈಕಲ್ಯತೆ ಹೊಂದಿರುವವರು | 2,000/- |
| 4 | ಸಂಧ್ಯಾಸುರಕ್ಷಾ ವೇತನ | 1,200/- |
| 5 | ಮನಸ್ವಿನಿಯೋಜನೆ | 800/- |
| 6 | ಮೈತ್ರಿ ಯೋಜನೆ | 800/- |
| 7 | ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ | 2,000/- |
| 8 | ಆಸಿಡ್‌ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 10,000/- |
| 9 | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ್ | |
| | ಶೇಕಡ 25% ರಿಂದ 59% ಅಂಗವಿಕಲತೆ ಹೊಂದಿರುವವರು | 2,000/- |
| | ಶೇಕಡ 60%ಕ್ಕಿಂತ ಹೆಚ್ಚಿನಅಂಗವಿಕಲತೆಹೊಂದಿರುವವರು | 4,000/- |

ವಿವಿಧ ಪಿಂಚಣಿ ಯೋಜನೆಗಳಡಿ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ-ಅಂಶಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

| | | |
|---|---|---|
| ಆ) | ಕಳೆದ ಎರಡು-ಮೂರು ತಿಂಗಳುಗಳಿಂದ ಸರ್ಕಾರದಿಂದ ಫಲಾನುಭವಿಗಳಿಗೆ ಪಿಂಚಣಿ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಯನ್ನುNational Payment Corporation of India [NPCI] ಮೂಲಕ ನಿರ್ವಹಿಸಲಾಗುತ್ತಿದ್ದು, ಎಲ್ಲಾ ಅರ್ಹ ಫಲಾನುಭವಿಗಳಿಗೂ ಜಿಲ್ಲಾ ಖಜಾನೆಯಲ್ಲಿ ಬಿಲ್ಲು ತಯಾರಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗಿದೆ. ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / IFSC CODE / PIN CODE ಮಾಹಿತಿಯನ್ನು ನಿಖರವಾಗಿ ನೀಡದೇ ಇರುವ ಪ್ರಕರಣಗಳು NPCI ನಿಂದ ಸ್ವೀಕೃತವಾದ NO SUCH ACCOUNT / INVALID BANK DETAILS ಮತ್ತು INVALID ADDRESS ಕಾರಣದಿಂದ 9273 ಪ್ರಕರಣಗಳಲ್ಲಿ ಪಿಂಚಣಿ ಪಾವತಿ ವಿಫಲವಾಗಿರುವುದು ಕಂಡು ಬಂದಿರುತ್ತದೆ. ಪಿಂಚಣಿ ಪಾವತಿ ವಿಫಲವಾದ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ತಂತ್ರಾಂಶದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದ್ದು, ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ನ್ಯೂನತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ತಹಶೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |
| ಇ) | ಯಾವ ಕಾಲಮಿತಿಯೊಳಗಡೆ ಫಲಾನುಭವಿಗಳಿಗೆ ಪಿಂಚಣಿ ನೀಡಲಾಗುವುದು? (ವಿವರ ನೀಡುವುದು) | ಯಾವ ಕಾರಣಕ್ಕಾಗಿ ಫಲಾನುಭವಿಯ ಪಿಂಚಣಿ ಸ್ಥಗಿತಗೊಂಡಿದೆಯೋ ಆ ನ್ಯೂನತೆಯನ್ನು ಸರಿಪಡಿಸಿದ ನಂತರದ ಮಾಹೆಯಲ್ಲಿ ಅವರಿಗೆ ಪಿಂಚಣಿ ಪಾವತಿಯಾಗುತ್ತದೆ. |

**ಕಡತ ಸಂಖ್ಯೆ:ಆರ್‌ಡಿ 27 ಕೆಎಟಿ ಎಸ್‌ಎಸ್‌ಪಿ 2023**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು